ನಿಧಿಯ ಮೂಲಕ ಇವರಿಗೆ ಹಳದಿ ಕಾರ್ಡ್‌ಗಳನ್ನು ಕೊಟ್ಟು ಆ ಚಿಕಿತ್ಸೆಯ ಭಾರವನ್ನು ಸರ್ಕಾರವೇ ತೆಗೆದುಕೊಳ್ಳಬೇಕೆಂಬ ಯೋಚನೆಯನ್ನು ಮಾಡುತ್ತಿದೆ, ಅದನ್ನು ನಾವು ಖಂಡಿತವಾಗಿ ನಿಮ್ಮ ಸಲಹೆಯ ಆಧಾರದ ಮೇಲೆ, ಆ ಯೋಜನೆಯನ್ನು ರೂಪಿಸುತ್ತೇವೆ

(ಉ) ವಿಷಯ ಜುರಾಲದಲ್ಲಿ ಹಳ್ಳಿಗಳು ಮುಳುಗಡೆಯಾಗಿರುವ ಬಗ್ಗೆ

ಶ್ರೀ ಎ ಪಾಪರೆಡ್ಡಿ (ರಾಯಚೂರು) ಮಾನ್ಯ ಅಧ್ಯಕ್ಷರೇ, ಜುರಾಲದಲ್ಲಿ 5 ಹಳ್ಳಿಗಳು ಮುಳುಗಡೆಯಾಗಿವೆ, ಎರಡು ದೇವಸ್ಥಾನಗಳು ಮುಳುಗಡೆಯಾಗಿವೆ, ನಾರದಗಟ್ಟ ದತ್ತಾತ್ರೇಯಾ ದೇವಸ್ಥಾನಗಳು ಮುಳುಗಡೆಯಾಗಿವೆ, ಇಲ್ಲಿಯವರೆಗೆ ಈ 5 ಹಳ್ಳಿಗಳಿಗೂ ಪುನರ್ವಸತಿಯನ್ನು ಕಲ್ಪಿಸಿಲ್ಲ, ಮತ್ತೆ ಜಿಲ್ಲಾಧಿಕಾರಿಗಳು ಪುನರ್ವಸತಿಗೆ ಬೇಕಾದಂತಹ ಎಲ್ಲಾ ಮಾಹಿತಿಯನ್ನು ಇಲ್ಲಿಗೆ ಕಳುಹಿಸಿಕೊಟ್ಟಿದ್ದಾರೆ, ಇದರ ಬಗ್ಗೆ ಇದುವರೆಗೂ ಏನು ಕ್ರಮವನ್ನು ತೆಗೆದುಕೊಂಡಿಲ್ಲ, ಇಲ್ಲಿ ದೇವಸ್ಥಾನಗಳಿಗೆ ಹೋಗುವುದಕ್ಕೆ ದಾರಿ ಇಲ್ಲ, ಲಕ್ಷಾಂತರ ಭಕ್ತಾದಿಗಳು ಹೋಗುತ್ತಿದ್ದಾರೆ, ಅಲ್ಲಿ ದಾರಿ ಇಲ್ಲ, ಇದಕ್ಕೆ ಬ್ರಿಡ್ಜ್ ಕಟ್ಟಿಕೊಡುತ್ತೇವೆಂದು ಆಗ್ರಿಮೆಂಟ್ ಆಗಿದೆ, ಆಂಧ್ರ ಪ್ರದೇಶದ ಮತ್ತು ಕರ್ನಾಟಕ ಸರ್ಕಾರದಿಂದ ಇಲ್ಲಿಯವರೆಗೂ ಯಾವ ಕಾರ್ಯಕ್ರಮಗಳು ಆಗಲಿಲ್ಲ, ಆ ಕ್ಷೇತ್ರದಲ್ಲಿರುವಂತಹ ಜನರು ದೇವಸ್ಥಾನಗಳಿಗೆ ಹೋಗುವುದಕ್ಕೆ ತೊಂದರೆಯಾಗಿದೆ, ಆದುದರಿಂದ ಈ 5 ಹಳ್ಳಿಗಳ ಜನರಿಗೆ ಪುನರ್ವಸತಿಯನ್ನು ಕಲ್ಪಿಸಿಕೊಡಬೇಕೆಂದು, ನಾನು ತಮ್ಮ ಮುಖಾಂತರ ಮಾನ್ಯ ಮಂತ್ರಿಯವರನ್ನು ಕೇಳಿಕೊಳ್ಳುತ್ತೇನೆ

ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರೇ, ಈಗಾಗಲೇ ಪುನರ್ವಸತಿಯ ವಿಚಾರದಲ್ಲಿ, ಜುರಾಲದಿಂದ ಬರುವಂಥಾದ್ದು ಗೋದಾವರಿ ಕಣವೆಗೆ ಸೇರಿರುವುದರಿಂದ ಅದರಲ್ಲಿ ಸ್ವಲ್ಪ ಭಿನ್ನಾಭಿಪ್ರಾಯವಿದೆ, ಹಿನ್ನೀರನ್ನು ಆಂಧ್ರಪ್ರದೇಶದವರು ಬಳಸುವಂಥಾದ್ದು ಅದು ಅವರ ಹಕ್ಕು, ವಿದ್ಯುಚ್ಛಕ್ತಿ ಉತ್ಪಾದನೆಯಲ್ಲಿ ನಮ್ಮ ಪಾಲು ಇದೆ ಇಲ್ಲಿ ಪುನರ್ವಸತಿಯನ್ನು ಮಾಡುವುದಕ್ಕೆ ಆಂಧ್ರ ಪ್ರದೇಶದವರು ದುಡ್ಡು ಕೊಡಬೇಕೆಂಬ ಮಾತು ಇದೆ, ದಿವಂಗತ ದೇವರಾಜ್ ಅರಸುರವರ ಕಾಲದಲ್ಲಿ ಈ ಒಪ್ಪಂದ ಆಗಿದೆ, ಇಲ್ಲಿ ಎರಡು ದೊಡ್ಡ ಸೇತುವೆಗಳನ್ನು ಕಟ್ಟಿಸಿಕೊಡಬೇಕೆಂದು ಇದೆ, ಆ ಕಾರಣಕ್ಕಾಗಿ ಈಗಾಗಲೇ ವಿಶೇಷವಾದಂತಹ ಕರ್ತವ್ಯಗಳನ್ನು ನಾವು ಅವರಿಗೆ ಇಟ್ಟುಕೊಂಡಿದ್ದೇವೆ, ಈಗ ತಾವು ಏನು ಹೇಳಿದ್ದೀರಿ, ಅದಕ್ಕೆ ನಾವು ಕೃಷ್ಣ ಮೇಲ್ದಂಡೆ ಯೋಜನೆಯಲ್ಲಿ ಯಾವ ರೀತಿಯಾಗಿ ಪುನರ್ವಸತಿ ಯೋಜನೆಯನ್ನು ರೂಪಿಸಿದ್ದೀರಿ, ಅದೇ ರೀತಿಯಲ್ಲಿ ಇಲ್ಲೂ ರೂಪಿಸುತ್ತೇವೆ, ಈಗ ತಾವು ಏನು ಆತಂಕಕ್ಕೆ ಒಳಪಟ್ಟಿದ್ದೀರಿ, ತಾವು ಇಷ್ಟು ದಿವಸ ಏನು ಕಷ್ಟಗಳನ್ನು ಅನುಭವಿಸಿದ್ದೀರಿ, ಅದು ಪರಿಹಾರವಾಗುತ್ತೆದೆಂಬ ಮಾತನ್ನು ಹೇಳಲಿಚ್ಛಿಸುತ್ತೇನೆ ಈಗ ಅಲ್ಲಿರುವಂಥ ಆಂಧ್ರಪ್ರದೇಶದ ಸರ್ಕಾರದ ಜೊತೆಯಲ್ಲಿ ಇಲ್ಲಿ ಇರುವಂತಹ ಸಮ್ಮಿಶ್ರ ಸರ್ಕಾರದ ನಮ್ಮ ಮಾನ್ಯ ಮುಖ್ಯಮಂತ್ರಿಯವರು, ಮಾತನಾಡಿ , ಆ ಸೇತುವೆ ಕಟ್ಟುವ ವಿಚಾರ ಹಾಗೂ ಪುನರ್ವಸತಿಗೆ ಹಣವನ್ನು ಬಿಡುಗಡೆ ಮಾಡುವ ಬಗ್ಗೆ ನಾವು ಒತ್ತಾಯ ಮಾಡಿ, ಕೆಲಸವನ್ನು ಪ್ರಾರಂಭ ಮಾಡುತ್ತೇವೆ

ಶ್ರೀ ಸಿದ್ದುಸಾವದಿ ಮಾನ್ಯ ಅಧ್ಯಕ್ಷರೇ, ಇಂದಿನ ಕಾರ್ಯಕಲಾಪಗಳ ಪಟ್ಟಿ ಯಲ್ಲಿರುವಂತಹ ಕೈಮಗ್ಗ ನೇಕಾರರ ವಿಷಯವಾಗಿ ನಿಯಮ 69ರ ಮೇಲೆ ಚರ್ಚೆಸಲು ತಾವು ಅವಕಾಶವನ್ನು ಕೊಟ್ಟಿದ್ದೀರಿ, ರಾಜ್ಯದಲ್ಲಿ 1975ರಲ್ಲಿ ಕೈಮಗ್ಗ ಕೈಗಾರಿಕೆಯನ್ನು ಅಭಿವೃದ್ಧಿ ಪಡಿಸಲು, ಅದನ್ನು ಘೋಷಿಸಲು, ಅದರಲ್ಲೂ ವಿಶೇಷವಾಗಿ ಕೈಮಗ್ಗ ನೇಕಾರರ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಲು.. ..

ಅಧ್ಯಕ್ಷರು ಮಾನ್ಯ ಸದಸ್ಯರೇ, ಈಗ ಶೂನ್ಯ ವೇಳೆಯಲ್ಲಿ ವಿಷಯವನ್ನು ಪ್ರಸ್ತಾಪ ಮಾಡಲು ಹೆಸರುಗಳನ್ನು ಕೊಟ್ಟಿದ್ದಾರೆ, ಇದಾದನಂತರ ತಮಗೆ ನಿಯಮ 69ರ ಮೇಲೆ ಚರ್ಚೆ ಮಾಡಲು ತಮಗೆ ಅವಕಾಶವನ್ನು ಕೊಡುತ್ತೇನೆ ದಯಮಾಡಿ ತಾವು ಕುಳಿತುಕೊಳ್ಳಿ, ಈ ವಿಷಯದ ಬಗ್ಗೆ ಮಾನ್ಯ ಗೋವಿಂದ ಎಂ ಕಾರಜೋಳ, ಮಾನ್ಯ ಡಿ ಆರ್ ಪಾಟೀಲ್ ಹಾಗೂ ಇನ್ನಿತರ ಸದಸ್ಯರುಗಳು ಹೆಸರುಗಳನ್ನು ಕೊಟ್ಟಿದ್ದೀರಿ, ನಿಮಗೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ, ಈಗ ಶೂನ್ಯ ವೇಳೆಯಲ್ಲಿ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಲು ಸದಸ್ಯರು ಇಚ್ಛಿಸಿದ್ದಾರೆ, ಇದಾದನಂತರ ತೆಗೆದುಕೊಳ್ಳೋಣ,

(ಊ) ವಿಷಯ ಬೆಳೆ ವಿಮೆ ಹಣ ಪಾವತಿಯಾಗದೇ ಇರುವ ಬಗ್ಗೆ

†ಶ್ರೀ ಸಿ ಎಂ ಉದಾಸಿ ಮಾನ್ಯ ಅಧ್ಯಕ್ಷರೇ, ನಾನು ಹಿಂದೆ ಶೂನ್ಯವೇಳೆಯಲ್ಲಿ ಕರ್ನಾಟಕ ರೈತರ ಸಮಸ್ಯೆಗಳ ಬಗ್ಗೆ ಪ್ರಸ್ತಾಪ ಮಾಡಿದ್ದೆ, 2002ನೇ ಇಸವಿಯ ಹಿಂಗಾರು ಬೆಳೆಯ ವಿಮೆ ಪರಿಹಾರದ ಹಣ ಸುಮಾರು 27 ಕೋಟಿ ರೂಪಾಯಿಗಳಷ್ಟು ರೈತರಿಗೆ ಬಿಡುಗಡೆಯಾಗಬೇಕಾಗಿತ್ತು, ಈ 2002ರ ಪರಿಹಾರದ ಹಣ 2003ರ ಜೂನ್ ತಿಂಗಳ 30 ರೊಳಗೆ ದೊರೆಯಬೇಕಾದಂತಹ ಹಣ, ಇದುವರೆಗೂ ಇದು ದೊರೆತಿಲ್ಲವೆಂಬ 'ವಿಚಾರವನ್ನು ಸರ್ಕಾರದ ಗಮನಕ್ಕೆ ತರುವಂತಹ ಕೆಲಸವನ್ನು ಮಾಡಿದ್ದೆ, ಆಗ 27 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದ, ಎಂಬ ಮಾತನ್ನು ಹೇಳಿದ್ದರು, ಇದುವರೆಗೂ ರಾಜ್ಯಸರ್ಕಾರ ತನ್ನ ಪಾಲಿನ ವಂತಿಗೆಯನ್ನು ಕಟ್ಟದೇ ಇರುವುದರಿಂದ, ಕಳೆದ ಒಂದು ವರ್ಷದಿಂದಲೂ ಸಹ ಹಿಂಗಾರು ಬೆಳೆ ವಿಮೆ ಪರಿಹಾರ 2002–2003ನೇ ಸಾಲಿನದ್ದು ಸಿಗುತ್ತಿಲ್ಲ, ಹಾಗೂ 2002–2003ನೇ ಸಾಲಿನ ಮುಂಗಾರು ಬೆಳೆ ವಿಮೆ ಪರಿಹಾರದಲ್ಲಿ ಸುಮಾರು 8 ಕೋಟಿ ರೂಪಾಯಿಗಳಷ್ಟು ಬಾಕಿ ಉಳಿದಿದ್ದು, ಇದು ಸೇರಿ ಪರಿಹಾರದ ಹಣ ಪಾವತಿಯಾಗುತ್ತಿಲ್ಲ, ಇದರ ಜೊತೆಗೆ 2003–20034ನೇ ಸಾಲಿನಲ್ಲಿ ಸುಮಾರು 7 ಲಕ್ಷ ಜನ ರೈತರು ಕರ್ನಾಟಕ ರಾಜ್ಯದಾದ್ಯಂತ "ಬೆಳೆ ವಿಮೆ" ಯನ್ನು ಮಾಡಿಸಿದ್ದಾರೆ, ಅದು ಒಟ್ಟು 931 ಕೋಟಿ ರೂಪಾಯಿಗಳು, ಈ ಹಿಂದಿನ ಮೂರು ವರ್ಷಗಳು ಸತತವಾಗಿ ಭೀಕರ ಬರಗಾಲ ಬಂದಂತಹ ಸಂದರ್ಭದಲ್ಲಿ ಬೆಳೆ ವಿಮೆ ಪರಿಹರ, 450 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಪರಿಹಾರ, ರೈತರಿಗೆ ದೊರೆಯಬೇಕಾಗಿತ್ತು, ಈ ಹಣ ಇವತ್ತಿನವರೆಗೂ ಬಿಡುಗಡೆ ಮಾಡುವಂತಹ ವಿಚಾರದಲ್ಲಿ ಸರ್ಕಾರ ಯಾವುದೇ ಕ್ರಮವನ್ನು ಕೈಗೊಂದಿಲ್ಲ, ತನ್ನ ಪಾಲಿನ ವಂತಿಕೆಯನ್ನು ಕಟ್ಟಿಲ್ಲ, ಆ ಕಾರಣದಿಂದ ರೈತರಿಗೆ ವಿಮೆ ಪರಿಹಾರದ ಹಣ ದೊರೆಯುತ್ತಿಲ್ಲ, ಈ ರೀತಿ ಇರಬೇಕಾದರೆ, ಇವತ್ತು ಏನು ಮಾಡಿದ್ದಾರೆಂದರೆ, ರೈತರು ಬೆಳೆ ವಿಮೆ ಮಾಡಿಸಬೇಕಾದರೆ, idemnity ಮಾಡಬೇಕಾಗಿತ್ತು, ಅದನ್ನು ಶೇಕಡಾ 90 ಇರುವಂಧಾದ್ದನ್ನು ಶೇಕಡಾ 80 ಮಾಡಿದರು, ಶೇಕಡಾ 80 ಇದ್ದದ್ದನ್ನು ಶೇ 60 ಮಾಡಿದ್ದಾರೆ, ಮತ್ತು ವಿಮೆ ಹಣ ಕಂತು ಏನು ಕಟ್ಟಬೇಕಾಗಿದೆ, ಆ ಹಣವನ್ನು ಜಾಸ್ತಿ ಮಾಡಿ, ವಿಮೆ ಹಣ ಕಾರಣದಿಂದ ಇಡೀ ರಾಜ್ಯದಾದ್ಯಂತ ರೈತರು ಹಿಂಗಾರಿ ಬೆಳೆ ವಿಮೆ ಮಾಡಿದಂತಹ 11 ಲಕ್ಷ ಜನ ರೈತರಿಗೆ ಈ ಬೆಲೆ ವಿಮೆ ಪರಿಹಾರ ಸಿಗುತ್ತಿಲ್ಲ, ಮುಂಗಾರು ಬೆಳೆ ವಿಮೆ ಮಾಡಿರುವಂತಹ 7 ಲಕ್ಷ ಜನ ರೈತರಿಗೆ, ಪರಿಹಾರದ ಹಣ ಸಿಗುತ್ತಿಲ್ಲ, ಸರ್ಕಾರ ಇದರ ಬಗ್ಗೆ ನಿರ್ಲಕ್ಷ್ಯ ತೋರಿಸಿರುವುದರಿಂದ, ನಾನು ಮತ್ತೊಮ್ಮೆ ತಮ್ಮ ಗಮನಕ್ಕೆ ತರುತ್ತಿದ್ದೇನೆ, ಈ ವಿಷಯದಲ್ಲಿ ಅತೀ ಶೀಘ್ರದಲ್ಲಿ ಹಣ ಬಿಡುಗಡೆಯಾಗದಿದ್ದರೆ, ಉಗ್ರ ಹೋರಾಟಕ್ಕೆ ದಾರಿಯಾಗುತ್ತದೆ, ಹಿಂದೆ 2002–2003ನೇ ಸಾಲಿನಲ್ಲಿ ಬೆಳೆ ವಿಮೆ ಹಣಕ್ಕಾಗಿ ಹೋರಾಟ ಮಾಡಬೇಕಾದಂತಹ ಸಂದರ್ಭದಲ್ಲಿ, ಹಣ ಪಾವತಿಯಾಗದೇ